ಕಷ್ಟಗಳನ್ನು ಕಂಡು. ನಾನೆಲ್ಲಿ ಹುಚ್ಚನಾಗಿಬಿಡುವೆನೋ ಎಂದು ಒಮ್ಮೊಮ್ಮೆ ಹೆದರುತ್ತಿದ್ದೆ.

**ಪ್ರಶ್ನೆ :** ಮಹಾರಾಜ್, ಸುಮಾರು ಎಷ್ಟು ಜನ ಶರಣಾರ್ಥಿಗಳು ಬಂದಿದ್ದರು?

**ಸ್ವಾಮೀಜಿ :** ಒಟ್ಟು ಸಂಖ್ಯೆ ಹೇಳಲಾರೆ. ಇಷ್ಟು ಹೇಳಬಹುದು. ಪ್ರತಿನಿತ್ಯ ನಮ್ಮಲ್ಲಿಗೆ ಸುಮಾರು ಒಂದು ಸಾವಿರ ಜನ ಬರುತ್ತಿದ್ದರು. ಅವರನ್ನು ಕುರಿಗಳ ಹಿಂಡಿನಂತೆ ಲಾರಿಗಳಲ್ಲಿ ತುಂಬಿಸಿಕೊಂಡು ಬಂದು ನಮ್ಮಲ್ಲಿ ಕೆಳಗಿಳಿಸಿ ಹೋಗುತ್ತಿದ್ದರು.

ಒಂದು ದಿನ ಬಂದ ೧,೨೦೦ ಜನರಲ್ಲಿ ಸುಮಾರು ೬೦೦ ಜನ ನಮ್ಮ ಶಿಬಿರದಲ್ಲೇ ಸತ್ತುಹೋದರು. ಅಂದರೆ ಅವರೆಲ್ಲ ಮರಣೋನ್ಮುಖ ಅವಸ್ಥೆಯಲ್ಲಿಯೇ ಬಂದಿದ್ದರು. ಅದೊಂದು ಅಸಹಾಯಕ ಸ್ಥಿತಿ. ಮುಂಜಾನೆಯಿಂದ ಕೆಲಸ ಮಾಡಿ, ದಣಿದು ಸಂಜೆಗೆ ನಮ್ಮ ಆಶ್ರಯಸ್ಥಾನಕ್ಕೆ ಮರಳಿ, ಮೌನವಾಗಿ ಕುಳಿತುಕೊಂಡುಬಿಡುತ್ತಿದ್ದೆ. ರಾತ್ರಿಯ ನೀರವತೆ ಶ್ಮಶಾನದ ಮೌನ ದಂತೆ ತೋರುತ್ತಿತ್ತು. ಆಗಿಂದಾಗ್ಗೆ ಯಾವುದಾದರೊಂದು ದಿಕ್ಕಿನಿಂದ ಅಳುವ ದನಿ ಕೇಳಿಬರುತ್ತಿತ್ತು. ಆ ಘಟನೆಗಳನ್ನು ನೆನೆದರೆ ಮೈಯೆಲ್ಲ ನಡುಗುತ್ತದೆ.

**ಪ್ರಶ್ನೆ :** ಸ್ವಾಮೀಜಿ, ಸುಮಾರು ಎಷ್ಟು ದಿನಗಳ ಕಾಲ ಪರಿಹಾರ ಕಾರ್ಯಗಳು ನಡೆದವು?

**ಸ್ವಾಮೀಜಿ :** ಖಚಿತವಾಗಿ ಹೇಳಲಾರೆ. ಸುಮಾರು ಮೂರು ನಾಲ್ಕು ತಿಂಗಳುಗಳ ಕಾಲ ನಡೆದಿರಬಹುದು. ನಮ್ಮ ಸಾಧುಗಳು ಒಬ್ಬೊಬ್ಬರಾಗಿ ಕಾಯಿಲೆಗಳಿಗೆ ಗುರಿಯಾದರು. ಅಂಥವರನ್ನೆಲ್ಲಾ ಕಳುಹಿಸಿಬಿಡುತ್ತಿದ್ದೆ. ಕೊನೆಗೆ ಉಳಿದುಕೊಂಡದ್ದು ಇಬ್ಬರೇ– ಭೂತೇಶಾನಂದ ಹಾಗೂ, ಗಂಗಾಧರ ಎಂಬ ಕಾಮಾರಪುಕುರದ ನಿವಾಸಿ. ನಮ್ಮ ಕೈಲಾದಮಟ್ಟಿಗೆ ಕೆಲಸ ಮಾಡಿದೆವು.

ಅದೇ ಪರಿಹಾರ ಕಾರ್ಯದಲ್ಲಿ ಪಾಲ್ಗೊಂಡಿದ್ದ ಡಾ. ಸಚ್ಚಿದಾನಂದ ಧರ್ ಹೀಗೆ ಬರೆಯುತ್ತಾರೆ: "ಕೆಲವೊಮ್ಮೆ ಇಬ್ಬರು ಅಥವಾ ಮೂರು ಜನ ಮಿಲಿಟರಿ ಗೂಢಚಾರರು, ಅಲ್ಲಿದ್ದ ಸಾಧುಗಳಿಗೆ ಯುದ್ಧಕ್ಕೆ ಸಂಬಂಧಪಟ್ಟ ವಿಚಾರಗಳನ್ನು ಗುಪ್ತವಾಗಿ ತಿಳಿಸುತ್ತಿದ್ದರು. ಒಂದು ದಿನ ನಮಗೆ ಒಮ್ಮಿಂದೊಮ್ಮೆಲೇ ಬೇರೆ ಶಿಬಿರಕ್ಕೆ ಹೋಗಬೇಕೆಂದು ತಿಳಿಸಲಾಯಿತು. ಇದು ಮಿಲಿಟರಿಯ ಆದೇಶ ಎಂದು ತಿಳಿಸಿದರು. ನನ್ನ ಎಲ್ಲ ಸಾಮಾನುಗಳನ್ನು ಕಟ್ಟಿಕೊಂಡು ರೈಲು ನಿಲ್ದಾಣಕ್ಕೆ ಹೊರಟುನಿಂತೆ. ಸ್ವಾಮಿ ಭೂತೇಶಾನಂದರು ನನ್ನ ಜೊತೆಗೆ ಸ್ವಲ್ಪ ದೂರ ನಡೆದುಬಂದು ಬೀಳ್ಕೊಟ್ಟರು. ಅಂದಿನ ಕೊನೆಯ ಮಿಲಿಟರಿ ವಿಶೇಷ ರೈಲಿನಲ್ಲಿ ಹೊರಟೆ. ಡಿಮಾಪೂರ್‌ನಲ್ಲಿ ಜಪಾನಿಯರು ಬಾಂಬ್‌ಗಳನ್ನು ಹಾಕಿದ್ದಾರೆಂದು ಮರುದಿನ ನನಗೆ ತಿಳಿದುಬಂತು. ಸಾಧುಗಳು ತಾವೇ ಸ್ವತಃ ಆಪತ್ತಿನ ನಡುವೆ ಇದ್ದುಕೊಂಡು ನಮ್ಮನ್ನೆಲ್ಲಾ ಸುರಕ್ಷಿತ ಸ್ಥಳಗಳಿಗೆ ಕಳುಹಿಸಿದ್ದರು."

ರಾಮಕೃಷ್ಣ ಮಹಾಸಂಘದ ಈ ಪರಿಹಾರ ಕಾರ್ಯದ ಬಗ್ಗೆ ಮೆಚ್ಚುಗೆ ತೋರುತ್ತಾ ರಾಬರ್ಟ್ ರೀಡ್ ಹೇಳಿಕೆ ನೀಡಿದ್ದು ಹೀಗೆ: "ಯಾವುದೇ ಒಂದು ಭಾರತೀಯ ಸಂಸ್ಥೆ ಇಂಥ ಶಿಸ್ತಿನಿಂದ ಕೆಲಸ ನಿರ್ವಹಿಸಬಹುದೆಂಬುದನ್ನು ನಾನು ಕಲ್ಪಿಸಿಕೊಂಡಿರಲಿಲ್ಲ."

ಸ್ವಾಮಿ ಭೂತೇಶಾನಂದಜಿಯವರು ಬೇರೆ ಬೇರೆ ಪರಿಹಾರ ಕಾರ್ಯಗಳಲ್ಲೂ ಪಾಲ್ಗೊಂಡಿದ್ದರು. ಬಂಗಾಳದ ಬಾಂಕುರ ಹಾಗೂ ಕೋಂಟಾಯ್ ಪ್ರದೇಶಗಳಲ್ಲಿ ಬರಪೀಡಿತರ ಪರಿಹಾರ ಕಾರ್ಯ, ಪೂರ್ಣಿಯಾದಲ್ಲಿನ ಕಾಲರಾ ಪರಿಹಾರ ಕಾರ್ಯ, ಗುಜರಾತಿನ ಕಚ್ಛ್ ಭಾಗದಲ್ಲಿ ಸಂಭವಿಸಿದ ಭೂಕಂಪದಿಂದ ಬಳಲುತ್ತಿದ್ದವರ ಸೇವಾಕಾರ್ಯ, ಲಾಹೋರದಲ್ಲಿ ಸಂಭವಿಸಿದ ಪ್ಲೇಗ್ ಪರಿಹಾರ ಕಾರ್ಯ ಇತ್ಯಾದಿ. ಬೇಲೂರು ಮಠದಲ್ಲಿ ೧೯೬೬ ರಿಂದ ೧೯೭೫ ರವರೆಗೆ ಸ್ವಾಮೀಜಿಯವರು ರಾಮಕೃಷ್ಣ ಮಹಾಸಂಘದ ಸಹಾಯಕ ಕಾರ್ಯದರ್ಶಿಗಳಾಗಿದ್ದಾಗ, ಪರಿಹಾರ ಕಾರ್ಯಗಳ ನೇತೃತ್ವವನ್ನೇ ವಹಿಸಿದ್ದರು. ಆಗ ತಮ್ಮ ಅನುಭವಗಳನ್ನೇ ಆಧಾರವಾಗಿಟ್ಟುಕೊಂಡು ಬಹಳಷ್ಟು ಪರಿಹಾರ ಕಾರ್ಯಗಳಿಗೆ ಮಾರ್ಗದರ್ಶನ ನೀಡಿದರು ಮತ್ತು ಕೆಲವೊಮ್ಮೆ ಸಕ್ರಿಯವಾಗಿ ಕೂಡ ಭಾಗವಹಿಸಿದರು.

(*ಮುಂದುವರಿಯುವುದು*)

ಸ್ವಾಮಿ ಭೂತೇಶಾನಂದಜಿಯವರು ಶ್ರೀರಾಮಕೃಷ್ಣರ ಸಂತಶಿಷ್ಯರಲ್ಲಿ ಒಬ್ಬರಾದ ಸ್ವಾಮಿ ಶಾರದಾನಂದಜಿಯವರ ಶಿಷ್ಯರು. ಸ್ವಾಮಿ ಶಾರದಾನಂದಜಿ ಅವರು ತಮ್ಮ ಅಸಾಧಾರಣ ಶಾಂತ ಮತ್ತು ಪ್ರಸನ್ನತೆಯ ಸ್ವಭಾವಕ್ಕೆ ಹೆಸರುವಾಸಿಯಾಗಿದ್ದರು. ಸ್ವಾಮಿ ಭೂತೇಶಾನಂದರೂ ಈ ಅಚ್ಚರಿಯ ಗುಣವನ್ನು ಪಡೆದಿದ್ದರು.

ರಾಮಕೃಷ್ಣ ಮಹಾಸಂಘವು ಒಂದು ವರ್ಷ ಬಿಹಾರ ರಾಜ್ಯದಲ್ಲಿ ಬರಪರಿಹಾರ ಕಾರ್ಯಕ್ರಮವನ್ನು ನಡೆಸುತ್ತಿತ್ತು. ಒಂದು ಕಡೆ ಪರಿಹಾರದ ಮೇಲುಸ್ತುವಾರಿ ನಡೆಸುತ್ತಿದ್ದ ಕಿರಿಯ ಸಂನ್ಯಾಸಿಯೊಬ್ಬರು ಕೇಂದ್ರ ಕಛೇರಿಯ ಸೂಚನೆಗಳನ್ನು ಸರಿಯಾದ ರೀತಿಯಲ್ಲಿ ಪಾಲನೆ ಮಾಡುತ್ತಿಲ್ಲ ಎಂದು ಸ್ವಾಮಿ ಭೂತೇಶಾನಂದರಿಗೆ ವರದಿ ಬಂದಿತು. ಅವರು, ತಮ್ಮನ್ನು ಬಂದು ನೋಡುವಂತೆ ಆ ಮೇಲ್ವಿಚಾರಕರಿಗೆ ಹೇಳಿ ಕಳುಹಿಸಿದರು. ಆ ಮೇಲ್ವಿಚಾರಕರು ಸಮರ್ಥರೇನೋ ಸರಿ; ಆದರೆ ಅವರಿಗೆ ಅಹಂಕಾರದ ಸಮಸ್ಯೆಯಿತ್ತು. ಅವರು ಭೂತೇಶಾನಂದರನ್ನು ಕಾಣಲು ಬಂದಾಗ ಮನಸ್ಸಿನ ನಿಯಂತ್ರಣವನ್ನು ಕಳೆದುಕೊಂಡು ಸ್ವಾಮಿಗಳಿಗೆ ಅಪಮಾನವಾಗುವ ಹಾಗೆ ಸಿಕ್ಕಾಪಟ್ಟೆ ಕೂಗಾಡಿಬಿಟ್ಟರು. ಆದರೆ ಸ್ವಾಮಿ ಭೂತೇಶಾನಂದರು ಮಾತ್ರ ಸ್ವಲ್ಪವೂ ಉದ್ವಿಗ್ನಗೊಳ್ಳದೆ ಪ್ರಸನ್ನರಾಗಿಯೇ ಇದ್ದರು; ಸಂಪೂರ್ಣ ಶಾಂತಚಿತ್ತರಾಗಿದ್ದರು. ಕಿರಿಯ ಸಂನ್ಯಾಸಿಯೊಬ್ಬನ ಅಂತಹ ನಡವಳಿಕೆ ಶಿಕ್ಷಾರ್ಹವಾಗಿದ್ದರೂ, ಸ್ವಾಮಿ ಭೂತೇಶಾನಂದರು ಆ ಘಟನೆಯ ಬಗ್ಗೆ ಉದಾಸೀನದಿಂದಿದ್ದುಬಿಟ್ಟರು. ತಮ್ಮ ಸ್ವಭಾವಕ್ಕೆ ಅನುಗುಣವಾಗಿ ಅವರು ಆ ಸಂನ್ಯಾಸಿಯನ್ನು ಹಿಂದಿನಂತೆಯೇ ಸೋದರಭಾವದಿಂದ, ಪ್ರೀತಿಯಿಂದ ಕಾಣುವುದನ್ನು ಮುಂದುವರಿಸಿದರು.

(ಆಧಾರ: *ಭಾರತೀಯ ಸಂನ್ಯಾಸಿಮಠಗಳಲ್ಲಿನ ಜೀವನ,* ಸ್ವಾಮಿ ಭಾಸ್ಕರಾನಂದ, ಪುಟ, ೧೦೬)